# <u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 39(36) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 11.08.2025. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ದ್ವಿಭಾಷೆಯ ಕಲಿಕೆಯನ್ನು ಅನುಷ್ಠಾನಗೊಳಿಸದ ಶಾಲೆಗಳ ಸಂಖ್ಯೆ ಎಷ್ಟು; ಈ ಬಗ್ಗೆ ಇಲಾಖೆ ವಿಮರ್ಶೆ ನಡೆಸಿದೆಯೇ; ಇದರಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಆಗುತ್ತಿದೆಯೇ; (ವಿವರ ನೀಡುವುದು) | **ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ** ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ ಆಂಗ್ಲ ಮಾಧ್ಯಮ ಅಂದರೆ ದ್ವಿಭಾಷಾ(Bilingual) ತರಗತಿಗಳನ್ನು 2024-25ನೇ ಸಾಲಿನಲ್ಲಿ 2000 ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ 4134 ಶಾಲೆಗಳಿಗೆ ಅನುಮತಿಸಲಾಗಿದ್ದು, ಈ ಎಲ್ಲಾ ಶಾಲೆಗಳಲ್ಲಿ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ನಡೆಸಲು ಕ್ರಮವಹಿಸಲಾಗುತ್ತಿದೆ.<br><br>ಹೌದು ಈ ಬಗ್ಗೆ ಆಯಾ ಜಿಲ್ಲಾ ಉಪನಿರ್ದೇಶಕರ ಮುಖಾಂತರ ವಿಮರ್ಶೆ ನಡೆಸಲಾಗುತ್ತಿದೆ.<br><br>ಇದರಿಂದ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಹೆಚ್ಚಳವಾಗಿದೆ.<br><br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ** ರಾಜ್ಯದಲ್ಲಿ 3522 ಶಾಲೆಗಳು ಒಂದೇ ಮಾಧ್ಯಮದಲ್ಲಿ ನಡೆಯುತ್ತಿದೆ.<br><br>ಎಸ್.ಡಿ.ಎಂ.ಸಿ/ಜನಪ್ರತಿನಿಧಿಗಳಿಂದ ದ್ವಿಭಾಷಾ ಮಾಧ್ಯಮಕ್ಕೆ ಸ್ವೀಕೃತವಾಗುವ ಬೇಡಿಕೆಗಳ ಅನುಸಾರ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆ. |
| ಆ) | ದ್ವಿಭಾಷೆ ಶಿಕ್ಷಣವನ್ನು ನೀಡಲು ಬೇಕಾಗುವ ಶಿಕ್ಷಕರನ್ನು ನೇಮಿಸಲು ಇಲಾಖೆ ಕ್ರಮ ಕೈಗೊಂಡಿದೆಯೇ; ಎಷ್ಟು ಶಿಕ್ಷಕರನ್ನು ನೇಮಿಸಲಾಗಿದೆ; ಶಿಕ್ಷಕರನ್ನು ತರಬೇತಿಗೊಳಿಸಲು ಇಲಾಖೆ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | **ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ** ದ್ವಿಭಾಷಾ ಶಿಕ್ಷಣವನ್ನು ನೀಡಲು ಬೇಕಾಗುವ ಶಿಕ್ಷಕರನ್ನು ನೇಮಿಸಲು ಇಲಾಖೆ ಕ್ರಮ ಕೈಗೊಂಡಿದೆ.<br><br>ಸದರಿ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರುಗಳಿಗೆ ಪ್ರತಿ ವರ್ಷ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. 2024-25ನೇ ಸಾಲಿನಲ್ಲಿ 1 ರಿಂದ 6ನೇ ತರಗತಿಯವರೆಗೆ ಬೋಧಿಸುವ 8707 ಶಿಕ್ಷಕರಿಗೆ Learning outcome based ತರಬೇತಿಯನ್ನು ನೀಡಲಾಗಿದೆ. 2025-26ನೇ ಸಾಲಿನಲ್ಲಿ 10260 ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿದೆ.<br><br>**ಸರ್ಕಾರಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ** ದ್ವಿಭಾಷಾ ಶಿಕ್ಷಣವನ್ನು ನೀಡಲು ಬೇಕಾಗುವ ಶಿಕ್ಷಕರನ್ನು ನೇಮಿಸಲು ಇಲಾಖೆ ಕ್ರಮ ಕೈಗೊಂಡಿದೆ. |

| | | |
|---|---|---|
| | | ರಾಜ್ಯ ಸರ್ಕಾರಿ ಪ್ರೌಢಶಾಲೆಗಳಲ್ಲಿ ದ್ವಿಭಾಷೆ ಇರುವ ಮಾಧ್ಯಮದ ಪೌಢಶಾಲೆಗಳಲ್ಲಿ ಅಂದರೆ ಕನ್ನಡ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ / ಉರ್ದು ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ / ಮರಾಠಿ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ / ತೆಲುಗು ಮಾಧ್ಯಮ ಜೊತೆಗೆ ಆಂಗ್ಲ ಮಾಧ್ಯಮ ಮುಂತಾದವುಗಳು ಇರುವಂತಹ ಪ್ರೌಢಶಾಲೆಗಳಲ್ಲಿ ಕೋರ್ ವಿಷಯಗಳಿಗೆ ಅದೇ ಶಿಕ್ಷಕರು ಎರಡೂ ಮಾಧ್ಯಮದಲ್ಲಿ ಬೋಧನೆ ಮಾಡಬೇಕು.<br><br>ಈ ಶಾಲೆಗಳಲ್ಲಿ ಕನಿಷ್ಠ 06 ವಿಭಾಗಗಳಿಗೆ ನಿಗದಿಪಡಿಸಿರುವಂತೆ ಪಿ.ಸಿ.ಎಂ., ಕಲಾ ವಿಷಯಗಳಿಗೆ ತಲಾ ಇಬ್ಬರು ಶಿಕ್ಷಕರು, ಉಳಿದ ವಿಷಯಗಳಿಗೆ ಹಾಗೂ ಭಾಷೆಗಳಿಗೆ ತಲಾ ಒಬ್ಬರಂತೆ ಒಟ್ಟು 10 ಶಿಕ್ಷಕರನ್ನು ನಿಗದಿಪಡಿಸಲಾಗಿದೆ. ನಂತರ ಹೆಚ್ಚುವರಿ ವಿಭಾಗಗಳಿದ್ದಲ್ಲಿ ಕೋಷ್ಟಕದಲ್ಲಿರುವಂತೆ ಶಿಕ್ಷಕರನ್ನು ನೀಡಲಾಗಿದೆ. ಕೋಷ್ಟಕವನ್ನು **ಅನುಬಂಧದಲ್ಲಿ** ಒದಗಿಸಲಾಗಿದೆ.<br><br>ಅದರಂತೆ ಪ್ರಸ್ತುತ ಇರುವ ಮಾಧ್ಯಮದಲ್ಲಿ ಆಂಗ್ಲ ಭಾಷಾ ಮಾಧ್ಯಮಕ್ಕೆ ಸದರಿ ಶಾಲೆಯಲ್ಲಿ ಇರುವ ಶಿಕ್ಷಕರ ಎರಡೂ ಮಾಧ್ಯಮದಲ್ಲಿ ಬೋಧನೆ ಮಾಡಬೇಕಾಗಿರುತ್ತದೆ.<br><br>ಸದರಿ ಹಾಗೂ ಪ್ರಸ್ತುತ ಇರುವ ಮಾಧ್ಯಮದಲ್ಲಿ ಆಂಗ್ಲ ಮಾಧ್ಯಮವನ್ನು ಹೊರತುಪಡಿಸಿ ಅಲ್ಪ ಸಂಖ್ಯಾತ ಭಾಷಾ ಮಾಧ್ಯಮ ಪ್ರಾರಂಭಿಸಿದಲ್ಲಿ ಮಾಧ್ಯಮಕ್ಕೆ ಕೋರ್ ವಿಷಯಗಳಿಗೆ 03 ಹುದ್ದೆಗಳನ್ನು ಹಾಗೂ ಆಯಾ ಭಾಷಾ ಮಾಧ್ಯಮದ ಒಂದು ಹುದ್ದೆಯನ್ನು ಪ್ರಸ್ತುತ ಇರುವ ಶಿಕ್ಷಕರ ಜೊತೆ ನೀಡಲಾಗುವುದು.<br><br>ಸರ್ಕಾರಿ ಪ್ರೌಢಶಾಲಾ ಶಿಕ್ಷಕರಿಗೆ ನಿಗಧಿತ ಅವಧಿಗೆ ವಿಷಯಾಧಾರಿತ ತರಬೇತಿಗಳನ್ನು ನೀಡಲಾಗುತ್ತಿದೆ. |

ಸಂಖ್ಯೆ: ಇಪಿ 268 ಪಿಜಿಸಿ 2025

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001.

ಸಂಖ್ಯೆ:ಸಿ4(1)ಸ.ಪ್ರೌ.ಶಾ.ಹೆ.ಶಿ. **47/2021-22** ದಿನಾಂಕ: **13.04.2022**

## :ಪರಿಷ್ಕೃತ ಜ್ಞಾಪನ:

ವಿಷಯ: 2022-23ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅವಶ್ಯಕ/ಹೆಚ್ಚುವರಿ ಹುದ್ದೆಗಳನ್ನು ಗುರುತಿಸಿ ಸ್ಥಳಾಂತರಿಸುವ ಕುರಿತು.

ಉಲ್ಲೇಖ: 1) ಈ ಕಛೇರಿ ಅಧೀಕೃತ ಜ್ಞಾಪನ ಪತ್ರ ಸಮ ಸಂಖ್ಯೆ: ದಿನಾಂಕ: 29.03.2022

2)ಈ ಕಛೇರಿ ಸುತ್ತೋಲೆ ದಿನಾಂಕ: 02.03.2012ರ ತಿದ್ದುಪಡಿ ಆದೇಶ ದಿನಾಂಕ: 10.08.2012

******

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಕಲಿಕೆ ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರ ಕೊರತೆಯಿರುವ ಶಾಲೆಗಳಿಗೆ ಸಿಬ್ಬಂದಿ ಸ್ತರ ವಿನ್ಯಾಸ [Staff Pattern]ಕ್ಕೆ ಅನುಗುಣವಾಗಿ ಶಿಕ್ಷಕರನ್ನು ಒದಗಿಸಬೇಕಾಗಿರುತ್ತದೆ. ಇದರನ್ವಯ ಹೆಚ್ಚುವರಿ ಖಾಲಿ ಹುದ್ದೆಗಳನ್ನು ಅಗತ್ಯವಿರುವ ಶಾಲೆಗಳಿಗೆ ಹೆಚ್ಚುವರಿ ಪ್ರಕ್ರಿಯೆ ಮೂಲಕ ಸಮರ್ಪಕವಾಗಿ ಹುದ್ದೆಗಳನ್ನು ಹಂಚಿಕೆ ಮಾಡಿ ಸರಿದೂಗಿಸಲು ಉಲ್ಲೇಖ(1)ರ ಅಧೀಕೃತ ಜ್ಞಾಪನದನ್ವಯ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಉಲ್ಲೇಖಿತ(1)ರ ಅಧೀಕೃತ ಜ್ಞಾಪನದ ಅಂಶಗಳೂ ಸೇರಿದಂತೆ ಮುಂದುವರೆದ ಭಾಗವಾಗಿ ಉಲ್ಲೇಖ(2)ರಂತೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ:

- 4 ವಿಭಾಗಗಳವರೆಗಿನ ಪ್ರೌಢ ಶಾಲೆಗಳಲ್ಲಿ ಸಿಬ್ಬಂದಿ ಸ್ತರ ವಿನ್ಯಾಸದ ಪ್ರಕಾರ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ 7 ಹುದ್ದೆಗಳಿರಬೇಕು. ಕನ್ನಡ ಭಾಷೆ-1, ಹಿಂದಿ-1, ಆಂಗ್ಲ ಭಾಷೆ-1, ಕಲಾ-1, ಗಣಿತ (ಪಿ.ಸಿ.ಎಂ)-1, ವಿಜ್ಞಾನ (ಸಿ.ಬಿ.ಝಡ್)-1, ದೈಹಿಕ ಶಿಕ್ಷಣ ಶಿಕ್ಷಕರ (ಗ್ರೇಡ್-1) ಹುದ್ದೆ-1 ನಿಗಧಿಪಡಿಸುವುದು.
- 5 ಅಥವಾ 5 ಕ್ಕಿಂತ ಹೆಚ್ಚು ವಿಭಾಗಗಳಿದ್ದಲ್ಲಿ ಮುಖ್ಯ ಶಿಕ್ಷಕರನ್ನು ಹೊರತುಪಡಿಸಿ ಪ್ರತಿ ವಿಭಾಗಕ್ಕೆ 1.5 ಶಿಕ್ಷಕರಂತೆ ಒದಗಿಸಲು ಅವಕಾಶವಿದೆ. ಅವಶ್ಯಕವಿರುವ/ಹೆಚ್ಚುವರಿ ಹುದ್ದೆಗಳನ್ನು ಈ ಕೆಳಕಂಡ ಕೋಷ್ಟಕ(ಅ)ದಲ್ಲಿ ನೀಡಲಾಗಿರುವಂತೆ ಗುರುತಿಸುವುದು.

ಕೋಷ್ಟಕ (ಅ)

| ವಿಭಾಗಗಳ ಸಂಖ್ಯೆ | ಗಣಿತ/ ವಿಜ್ಞಾನ (ಪಿ.ಸಿ.ಎಂ) | ವಿಜ್ಞಾನ (ಸಿ.ಬಿ.ಜೆಡ್) | ಕಲಾ | ಆಂಗ್ಲ | ಕನ್ನಡ ಭಾಷೆ | ಹಿಂದಿ ಭಾಷೆ | ದೈ.ಶಿ.ಶಿ ಗ್ರೇಡ್-1 | ವಿ.ಶಿ.ಶಿ | ಒಟ್ಟು |
|---|---|---|---|---|---|---|---|---|---|
| 4 ರವರೆಗೆ | 1 | 1 | 1 | 1 | 1 | 1 | 1 | 0 | 7 |
| 5 | 2 | 1 | 1 | 1 | 1 | 1 | 1 | 0 | 8 |
| 6 | 2 | 1 | 2 | 1 | 1 | 1 | 1 | 1 | 10 |
| 7 | 2 | 1 | 2 | 1 | 2 | 1 | 1 | 1 | 11 |
| 8 | 3 | 1 | 2 | 2 | 2 | 1 | 1 | 1 | 13 |
| 9 | 3 | 2 | 2 | 2 | 2 | 2 | 1 | 1 | 15 |
| 10 | 3 | 2 | 2 | 2 | 2 | 2 | 2 | 1 | 16 |
| 11 | 3 | 2 | 3 | 2 | 2 | 2 | 2 | 1 | 17 |
| 12 | 4 | 2 | 3 | 2 | 3 | 2 | 2 | 1 | 19 |
| 13 | 4 | 2 | 3 | 2 | 3 | 2 | 2 | 2 | 20 |
| 14 | 4 | 2 | 3 | 3 | 3 | 2 | 2 | 2 | 21 |
| 15 | 5 | 2 | 4 | 3 | 3 | 2 | 2 | 2 | 23 |

ಸಂಸ್ಕೃತ ಪ್ರಥಮ ಅಥವಾ ತೃತೀಯ ಭಾಷೆ ಇರುವ ಶಾಲೆಗಳಲ್ಲಿ, ಸಂಸ್ಕೃತ ಭಾಷೆ ಕಲಿಯುವ ಮಕ್ಕಳ ಸಂಖ್ಯೆ ಇದ್ದಲ್ಲಿ, ಇತರ ಮೂರು ಭಾಷಾ ಶಿಕ್ಷಕರ ಹುದ್ದೆಯ ಜೊತೆಗೆ ಸಂಸ್ಕೃತ ಭಾಷಾ ಶಿಕ್ಷಕರ ಹುದ್ದೆ ಇರತಕ್ಕದ್ದು. ಈ ರೀತಿ ಹುದ್ದೆಗಳನ್ನು ಮಂಜೂರು ಮಾಡಿದ್ದಲ್ಲಿ ಮೇಲ್ಕಂಡ ಕೋಷ್ಟಕದ ಒಟ್ಟು ಶಿಕ್ಷಕರ ಸಂಖ್ಯೆಯಲ್ಲಿ ಸೇರ್ಪಡೆಯಾಗತಕ್ಕದ್ದು (ಸಂಸ್ಕೃತ ಭಾಷೆ ಇರುವ ಶಾಲೆಗಳಿಗೆ ಮಾತ್ರ ಅನ್ವಯಿಸುತ್ತದೆ). ಕೋಷ್ಟಕದಲ್ಲಿ ಒಟ್ಟು ಕಾಲಂನಲ್ಲಿ ಸೇರ್ಪಡೆಯಾಗಿರುವುದಿಲ್ಲ. (ಮೇಲ್ಕಂಡ ಕೋಷ್ಟಕವು ಸಾಮಾನ್ಯವಾಗಿ ಎಲ್ಲಾ ಶಾಲೆಗಳಿಗೆ ಅನ್ವಯಿಸುತ್ತದೆ)

- ವಿಶೇಷ ಶಿಕ್ಷಕರ ಹುದ್ದೆಗಳನ್ನು ಪ್ರಸ್ತುತ ಸರ್ಕಾರ ನಿಗದಿಪಡಿಸಿರುವ ಸಿಬ್ಬಂದಿ ಮಾದರಿ ರಚನೆಯಂತೆ ಆ ಶಾಲೆಯ ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ನಿಗದಿಪಡಿಸಬಹುದಾಗಿದೆ. ಹುದ್ದೆ ಹೆಚ್ಚುವರಿಯಾದಲ್ಲಿ ಅಂತಹ ಹುದ್ದೆಯನ್ನು ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ಅದ್ಯತೆ ಮೇರೆಗೆ ಅವಶ್ಯಕತೆ ಇರುವ ಶಾಲೆಗೆ ನಿಗಧಿಪಡಿಸಲಾಗಿದೆ.
- ಒಂದು ವೇಳೆ ಈ ಮೇಲಿನ ಅಂಶದಂತೆ ಹೆಚ್ಚುವರಿಯಾಗುವ ವಿಶೇಷ ಶಿಕ್ಷಕರ ಹುದ್ದೆಯಲ್ಲಿ ಈಗಾಗಲೇ ವಿಶೇಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹ ಹುದ್ದೆಯನ್ನು ಅದೇ ಜಿಲ್ಲೆಯಲ್ಲಿರುವ ವಿದ್ಯಾರ್ಥಿಗಳ/ವಿಭಾಗಗಳ ಸಂಖ್ಯೆಗನುಗುಣವಾಗಿ ಗರಿಷ್ಠ ಸಂಖ್ಯೆಯಿಂದ ಪ್ರಾರಂಭಿಸಿ ಇಳಿಕೆ ಕ್ರಮದಲ್ಲಿ ಅದ್ಯತೆ ಮೇರೆಗೆ ಅವಶ್ಯಕತೆ ಇರುವ ಶಾಲೆಗೆ ಸ್ಥಳಾಂತರಿಸಲಾಗುವುದು.
- ಹುದ್ದೆ ಸಹಿತ ಹೆಚ್ಚುವರಿ ಆದ ಶಿಕ್ಷಕರನ್ನು ಜಿಲ್ಲೆಯೊಳಗೆ ಮಾತ್ರ ಸ್ಥಳಾಂತರಿಸಲಾಗುವುದು. ಒಂದು ವೇಳೆ ಹೆಚ್ಚುವರಿ ಶಿಕ್ಷಕರು ಬಯಸಿದ್ದಲ್ಲಿ ಜಿಲ್ಲೆಯ ಹೊರಗೆ ಸ್ಥಳಾಂತರಿಸಲಾಗುವುದು.
- ಕರ್ನಾಟಕ ಪಬ್ಲಿಕ್ ಶಾಲೆಗಳು ಹಾಗೂ ಉನ್ನತೀಕರಿಸಿದ ಆರ್.ಎಂ.ಎಸ್.ಎ ಶಾಲೆಗಳಲ್ಲಿನ 9-10ನೇ ತರಗತಿ ದಾಖಲಾತಿಯನ್ನು ಪ್ರೌಢ ಶಾಲೆಗಳಿಗೆ ಪರಿಗಣಿಸುವುದು.
- ಕರ್ನಾಟಕ ಪಬ್ಲಿಕ್ ಶಾಲೆಗಳು ಹಾಗೂ ಉನ್ನತೀಕರಿಸಿದ ಆರ್.ಎಂ.ಎಸ್.ಎ ಶಾಲೆಗಳಲ್ಲಿನ ೮ನೇ ತರಗತಿ ದಾಖಲಾತಿಯನ್ನು ಪ್ರಾಥಮಿಕ ಶಾಲಾ ದಾಖಲಾತಿಗೆ ಸೇರಿಸಿ ನಿಯಮಾನುಸಾರ ಹುದ್ದೆಗಳ ನಿಗಧಿಯನ್ನು ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)ರವರ ವಿಭಾಗದಿಂದ ಆದೇಶ ಹೊರಡಿಸುವುದು.
- ಶಾಲಾ ಮುಖ್ಯ ಶಿಕ್ಷಕರು ಶಾಲೆಯಲ್ಲಿನ ಕಾರ್ಯಭಾರಕ್ಕನುಗುಣವಾಗಿ ಬೋಧನಾ ಅವಧಿಗಳನ್ನು ಹಂಚಿಕೆ ಮಾಡುವುದು.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

ನಿರ್ದೇಶಕರು(ಪ್ರೌಢ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ. ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು. ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಿಕ್ಷಣ ವಾರ್ತೆ

ಪ್ರತಿಯನ್ನು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬಹುಮಹಡಿಗಳ ಕಟ್ಟಡ ಇವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
5. ನಿರ್ದೇಶಕರು, ಆರ್.ಎಂ.ಎಸ್.ಎ, ಆಯುಕ್ತಗರ ಕಛೇರಿ ಪೂರಕ ಕಟ್ಟಡ, ಬೆಂಗಳೂರು
6. ಅಪರ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
7. ವಿಭಾಗೀಯ ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ
8. ಸಹನಿರ್ದೇಶಕರು (ಗುಣಮಟ್ಟ)ಸರ್ವ ಶಿಕ್ಷಣ ಅಭಿಯಾನ, ಆಯುಕ್ತರ ಕಛೇರಿಯ ಪೂರಕ ಕಟ್ಟಡ, ಬೆಂಗಳೂರು
9. ಕಛೇರಿ ಪ್ರತಿ